**ಪ್ರಮಾಣ ವಚನ ಬೋಧಿಸಿದ ದಿನಾಂಕಃ 03.09.2025**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಟಿ.ಎಮ್.ಎನ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ನನ್ನ ಪ್ರಮಾಣ ಪತ್ರದ ಸಂಗತಿಗಳನ್ನು ರುಜುವಾತು ಪಡಿಸಲು ನಾನು ಈ ದಿನ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳ ಪೈಕಿ ಮಂಜೂರಾತಿ ಪ್ರಮಾಣ ಪತ್ರವನ್ನು ನಿಪಿ-1 ಎಂದು, 9 ಪಹಣಿಗಳನ್ನು ನಿಪಿ-2 ರಿಂದ 10 ಎಂದು, ಒಂದು ಹಕ್ಕು ಬದಲಾವಣೆ ದಾಖಲೆಯನ್ನು ನಿಪಿ-11 ಎಂದು, ಆಕಾರ ಬಂದ್ ಉತಾರ ದಾಖಲೆಯನ್ನು ನಿಪಿ-12 ಎಂದು, ಹಿಂಬರಹ ದಾಖಲೆಯನ್ನು ನಿಪಿ-13 ಎಂದು, 2 ಕಂದಾಯ ರಶೀದಿಗಳನ್ನು ಒಟ್ಟಾರೆ ನಿಪಿ-14 ಎಂದು, ರುಣಭಾರ ಪ್ರಮಾಣ ಪತ್ರವನ್ನು ನಿಪಿ-15 ಎಂದು, ಪಟ್ಟಾಪುಸ್ತಕ ದಾಖಲೆಯನ್ನು ನಿಪಿ-16 ಎಂದು, ವಂಶವೃಕ್ಷ ದಾಖಲೆಯನ್ನು ನಿಪಿ-17 ಎಂದು, ಎಸ್.ಎಲ್.ಎ.ಓ. ಅಧಿಕಾರಿ ನೀಡಿದ ಪರಿಹಾರ ತಿಳುವಳಿಕೆ ದಾಖಲೆಯನ್ನು ನಿಪಿ-18 ಎಂದು ಈಗ ಗುರುತಿಸಲಾಗಿದೆ.

**ಪಾಟೀ ಸವಾಲುಃ ಎಸ್.ಎಲ್.ಎ.ಓ. ಅಧಿಕಾರಿ ಪರ ವಕೀಲರಿಂದಃ**

ಎಸ್.ಎಸ್.ಎಲ್.ಓ. ಅಧಿಕಾರಿ ಗೈರು ಇದ್ದ ಕಾರಣ, ಸಾಕ್ಷಿಯನ್ನು ಪಾಟೀ ಸವಾಲನ್ನು ಮುಂದೂಡಲಾಗಿದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾ. ಜಿಲ್ಲೆ, ಬೆಂಗಳೂರು.